

# ನಾಲ್ಕು ದಿಕ್ಕು

ಅನು ಬೆಳ್ಳೆ

## ಮದುವಣಗಿತ್ತಿಯಂತೆ ಬಂದು ಮಾಯವಾದಳು!

### ಮುತ್ತು ಚಾಂಡಿ!

ಪಾಂಬು ಅದೇನೋ ಕರಾಮತ್ತು ನಡೆಸಿದ್ದಾನೆ. ಆ ದಿನ `ಬಂಡೆ'ಯಿಂದ ಹಿಂತಿರುಗೋ ವೇಳೆ ಅವನನ್ನು ಹಿಂಬಾಲಿಸಿಕೊಂಡು ಬರುವಾಗ ಅವನು ಹೇಳಿದ್ದೇನು? ಮುತ್ತು ಚಾಂಡಿಯನ್ನು ಸಿಟಿಗೆ ಬಿಡಲು ಬಂದಿರುವುದಾಗಿ ಹೇಳಿದ್ದ. ಆದರೆ ಈಗ?! ಅನುಮಾನ ಬಲವಾಯಿತು.

ಇನ್ಸ್‌ಪೆಕ್ಟರ್ ರಾಜಧಾನಿ ಕಟ್ಟಡದ ಕಡೆಗೆ ನೋಡುತ್ತಿರುವುದನ್ನು ಪೆಟ್ಟಿಗೆ ಅಂಗಡಿಯ ಮಾಲೀಕ ಆಶ್ಚರ್ಯದ ಕಣ್ಣುಗಳಿಂದ ನೋಡುತ್ತಿದ್ದ. ಇನ್ಸ್‌ಪೆಕ್ಟರ್‌ನ ಸ್ನೇಹ ಗಳಿಸುವಂತೆ ಅಂಗಡಿಯಿಂದ ಹೊರಗೆ ಬಂದ.

'ಸಾರ್, ನೀವು ಗಮನಿಸ್ತಿರೋ ವ್ಯಕ್ತಿ ಸಾಮಾನ್ಯನಲ್ಲ. ಅದೇ ಆ ಚಪ್ಪಟೆ ಕಾರ್‌ನಲ್ಲಿ ಬರೋನು' ತೋರು ಬೆರಳು ಪಾಂಬುವಿನತ್ತ ತೋರಿಸಿ ಹೇಳಿದ.

ಇನ್ಸ್‌ಪೆಕ್ಟರ್‌ಗೆ ತಲೆಗೆ ಮೊಟಕಿದಂತಾಯಿತು. ಏನೂ ತಿಳಿಯದ ಅಮಾಯಕನಂತೆ ನೋಟ ಹರಿಸಿ ಅಂಗಡಿಯವನನ್ನು ಕೇಳಿದ.

'ನೀನು ಯಾರ ಬಗ್ಗೆ ಆಡ್ದೆ?'

ಅಂಗಡಿಯಾತ ಇನ್ಸ್‌ಪೆಕ್ಟರ್‌ನ ಪ್ರಶ್ನೆಗೆ ಬೆದರಿದ.

'ಸಾರ್, ನಾನು ಹೇಳ್ತಿರೋದು, ಓ! ಅಲ್ಲೊಬ್ಬ ದಡಿಯನ ಜೊತೆಗೆ ಮಾತನಾಡುತಿರುವನಲ್ಲ. ಅವನ ಬಗ್ಗೆ ಹೇಳ್ದೆ. ಕ್ಷಮಿಸಿ, ನೀವು ಅವನನ್ನೇ ನೋಡ್ತಿದ್ದೀರೀಂತ ನಾನು ಹಾಗೆ ಹೇಳ್ದೆ'

ಅಂಗಡಿಯಾತನ ಮಾತಿನಿಂದ ರಾಜಧಾನಿಗೂ ತನ್ನ ತಪ್ಪಿನ ಅರಿವಾಯಿತು. ಎಲ್ಲರಿಗೂ ತಿಳಿಯುವ ಹಾಗೆ ತಾನೇಕೆ ಪಾಂಬುವನ್ನು ಹಿಂಬಾಲಿಸಿ ಕೊಂಡು ಬಂದೆ? ಅಂಗಡಿಯಾತನಿಂದ ವಿಷಯ ಸಂಗ್ರಹಿಸಿದರೂ ಅದು ತಾನು ಅಲ್ಲಿ ನಿಂತಿರುವುದು ಪಾಂಬುವಿಗಾಗಿ ಅಲ್ಲವೆನ್ನುವುದನ್ನು ಸ್ಪಷ್ಟಪಡಿಸಬೇಕು.

'ನಾನು ಆ ವ್ಯಕ್ತಿಯನ್ನು ನೋಡುತ್ತಿರುವುದಲ್ಲ. ನೀನು ಹೇಳಿದ ಮೇಲೆ ಆ ವ್ಯಕ್ತಿಯ ಬಗ್ಗೆ ತಿಳ್ಕೊಳ್ಳೋ ಆಸಕ್ತಿ ಮೂಡಿತು. ಅವನು ಯಾರು? ಅವನ ಜೊತೆಗೆ ಮಾತಾಡುತ್ತಿರುವವನು ಯಾರು? ಆತ ನಿಂಗೆ ಹೇಗೆ ಪರಿಚಯ?'

ಇನ್ಸ್‌ಪೆಕ್ಟರ್‌ನ ಮಾತಿನ ಬಾಣಗಳು ಹೊರ ಬಂದಾಗ ಪೆಟ್ಟಿಗೆ ಅಂಗಡಿಯಾತ ಬೆದರಿದ.

'ಸಾರ್, ನಂಗೇನೂ ಗೊತ್ತಿಲ್ಲ. ನೀವು ಆ ವ್ಯಕ್ತೀನಾ ನೋಡ್ತಿದ್ದೀರೀಂತ ನಾನು ಹೇಳ್ದೆ, ಅಷ್ಟೇ...' ಬೆದರಿದ್ದ ಅಂಗಡಿಯಾತ.

ಅಧಿಕಾರಿಗೂ ಅಷ್ಟೇ ಬೇಕಿದ್ದದ್ದು. ಅಂಗಡಿಯಾತನಿಗೆ ತಾನು ಗಮನಿಸುತ್ತಿರುವುದು ತಿಳಿಯಬಾರದೆನ್ನುವ ಉದ್ದೇಶದಿಂದ ಆ ಪ್ರಶ್ನೆಗಳನ್ನು ಕೇಳಿದ್ದ.

'ಈಗಷ್ಟೇ ನೀನು ಆ ವ್ಯಕ್ತಿಯ ಬಗ್ಗೆ ಹೇಳಿದ್ದೆ. ನನ್ನಿಂದ ಏನನ್ನೂ ಮುಚ್ಚಿಡ್ಬೇಡ. ನಾನು ನಿನಗೇನು ಮಾಡುವುದಿಲ್ಲ. ಈಗ ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರಿಸು'

'ಅದು... ಅದು... ಆ ವ್ಯಕ್ತಿ ಪಾಂಬು ಅನ್ನೋನು ಇಲ್ಲಿಗೆ ಯಾವಾಗಲೂ ಬರ್ತಿರ್ತಾನೆ. ಇಲ್ಲಿಗೆ ಬಂದಾಗಲೆಲ್ಲಾ ನನ್ನ ಅಂಗಡಿಗೆ ಬಂದು ಸಿಗರೇಟು ತಗೊಂಡು ಹೋಗ್ತಾನೆ'